# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 337 |
| ಸದಸ್ಯರ ಹೆಸರು | ಶ್ರೀ ಕೆ. ಎ. ತಿಪ್ಪೇಸ್ವಾಮಿ |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಮುಜರಾಯಿ ಇಲಾಖೆಯ ದೇವಸ್ಥಾನಗಳನ್ನು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ರಚನೆ ಮಾಡಲಾಗಿದೆಯೇ; (ಯಾವ ಮಾನದಂಡಗಳನ್ನು ಅನುಸರಿಸಿ ಈ ದೇವಸ್ಥಾನಗಳನ್ನು ಅಭಿವೃದ್ಧಿ ಪ್ರಾಧಿಕಾರಗಳನ್ನಾಗಿ ರಚನೆ ಮಾಡಲಾಗಿದೆ ವಿವರ ನೀಡುವುದು) | ರಾಜ್ಯದಲ್ಲಿರುವ ಮುಜರಾಯಿ ಇಲಾಖೆಯ ಈ ಕೆಳಕಂಡ ದೇವಸ್ಥಾನಗಳನ್ನು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ರಚನೆ ಮಾಡಲಾಗಿದೆ. |

| ಕ್ರ. ಸಂ | ದೇವಸ್ಥಾನಗಳ ಹೆಸರು | ಪ್ರಾಧಿಕಾರವನ್ನಾಗಿ ಮಾಡಿ ಹೊರಡಿಸಲಾದ ಸರ್ಕಾರದ ಆದೇಶ |
|---|---|---|
| 1 | ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕು, ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ, | ಸಂಖ್ಯೆ: ಸಂವ್ಯಶಾಇ 21 ಶಾಸನ 2014, ದಿನಾಂಕ: 06.09.2014 |
| 2 | ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಮೈಸೂರು ಜಿಲ್ಲೆ. | ಸಂಖ್ಯೆ: ಸಂವ್ಯಶಾಇ 12 ಶಾಸನ 2024, ದಿನಾಂಕ: 07.03.2024 |
| 3. | ಶ್ರೀ ಹುಲಿಗೆಮ್ಮ ದೇವಸ್ಥಾನ, ಕೊಪ್ಪಳ ಜಿಲ್ಲೆ. | ಸಂಖ್ಯೆ: ಸಂವ್ಯಶಾಇ 13 ಶಾಸನ 2024, ದಿನಾಂಕ: 07.03.2024 |
| 4. | ಶ್ರೀ ಘಾಟಿ ಸುಬ್ರಹ್ಮಣ್ಯ ದೇವಸ್ಥಾನ, ಬೆಂಗಳೂರು ಗ್ರಾಮಾಂತರ. | ಸಂಖ್ಯೆ: ಸಂವ್ಯಶಾಇ 14 ಶಾಸನ 2024, ದಿನಾಂಕ: 07.03.2024 |
| 5. | ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಬೆಳಗಾವಿ ಜಿಲ್ಲೆ. | ಸಂಖ್ಯೆ: ಸಂವ್ಯಶಾಇ 50 ಶಾಸನ 2024, ದಿನಾಂಕ: 10.09.2024 |

ಭಕ್ತಾದಿಗಳು ಹೆಚ್ಚಾಗಿ ಆಗಮಿಸುವ ಹೆಚ್ಚಿನ ಆದಾಯವಿರುವ ದೇವಾಲಯಗಳಲ್ಲಿ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ವಿವಿಧ ಇಲಾಖೆಗಳ ಸಹಕಾರ ಮತ್ತು ಅನುಮತಿ ಅಗತ್ಯವಿರುವುದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಪ್ರಾಧಿಕಾರ ರಚಿಸಿದಲ್ಲಿ ಅಗತ್ಯವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಹಕಾರಿಯಾಗುವಂತೆ ಪ್ರಾಧಿಕಾರ ರಚಿಸಲಾಗಿರುತ್ತದೆ.

| | ಪ್ರಶ್ನೆ | ಉತ್ತರ |
|---|---|---|
| ಆ) | ಬೆಂಗಳೂರಿನಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನವು ಸಹ "ಎ ಗ್ರೇಡ್" ದೇವಸ್ಥಾನವಾಗಿದ್ದು, ಅಧಿಕ ಆದಾಯ ವಿರುವುದರಿಂದ ಈ ದೇವಸ್ಥಾನವನ್ನು ಸಹ ಅಭಿವೃದ್ಧಿ ಪ್ರಾಧಿಕಾರವನ್ನಾಗಿ ರಚನೆ ಮಾಡಲಾಗುವುದೇ; | ಬೆಂಗಳೂರಿನಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನವನ್ನು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಮಾಡುವ ಪ್ರಸ್ತಾವನೆಯು ಸದ್ಯ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | 6ನೇ ಸರ್ಕಾರಿ ವೇತನ ಪಡೆದು 7ನೇ ಸರ್ಕಾರಿ ವೇತನದ ಮಧ್ಯಂತರ ಪರಿಹಾರ ಪಡೆದ ಈಗಾಗಲೇ ಕೆಲವು ದೇವಾಲಯದ ನೌಕರರಿಗೆ 7ನೇ ಸರ್ಕಾರಿ ವೇತನ ಜಾರಿಗೊಳಿಸಿದ್ದು, ಇನ್ನು ಕೆಲವು ದೇವಾಲಯದ ನೌಕರರಿಗೆ 7ನೇ ಸರ್ಕಾರಿ ವೇತನವನ್ನು ನೀಡದಿರಲು ಕಾರಣಗಳೇನು; ಈ 7ನೇ ಸರ್ಕಾರಿ ವೇತನವನ್ನು ಯಾವಾಗ ಜಾರಿಗೊಳಿಸಲಾಗುವುದು; | ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸರ್ಕಾರಿ ವೇತನ ಶ್ರೇಣಿ (6ನೇ ವೇತನ ಶ್ರೇಣಿ) ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ದೇವಾಲಯದ ನೌಕರರಿಗೆ 7ನೇ ಸರ್ಕಾರಿ ವೇತನ ಶ್ರೇಣಿಯನ್ನು ನಿಗಧಿಪಡಿಸುವ ಕುರಿತಂತೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ. |
| | "ಮುಜರಾಯಿ ದೇವಾಲಯದ ಸಿಬ್ಬಂದಿಗಳ ನಿಧಿ" ಎಂದು ಸ್ಥಾಪಿಸಿ, ದೇವಾಲಯಗಳಿಂದ ಇಂತಿಷ್ಟು ಶೇಕಡವಾರು ಮೊತ್ತವನ್ನು ಸಂಗ್ರಹಿಸಿ ಇದರ ಜೊತೆಗೆ ಸರ್ಕಾರದಿಂದ ಒಂದು ಬಾರಿಗೆ ಠೇವಣಿ ಸಂಗ್ರಹಿಸಿ ಈ ನಿಧಿಯಿಂದ ಆದಾಯವಿಲ್ಲದ ದೇವಸ್ಥಾನದ ಸಿಬ್ಬಂದಿಗೂ ಸೇರಿದಂತೆ ವೇತನ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಪ್ರಸ್ತುತ ಈ ರೀತಿಯ ಯಾವುದೇ ಯೋಜನೆ ಅಥವಾ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. |

ಸಂಖ್ಯೆ: ಕಂಇ 153 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು